

ಇದು ಬೆಟ್ಟದಲ್ಲಿ ನಡೆಯುತ್ತಿರುವ ದೀಪಾರಾಧನೆಯಲ್ಲ; ರಾಮನಗರದ ಹಂದಿಗೊಂದಿ ಅರಣ್ಯಪ್ರದೇಶವನ್ನು ಆವರಿಸಿರುವ ಕಿಚ್ಚು!

### ಜನರ ವಿಶ್ವಾಸವೇ ಕಾಡಿನ ರಕ್ಷಕ

ಅರಣ್ಯ ಜಿಲ್ಲೆಯೆಂದೇ ಖ್ಯಾತವಾಗಿರುವ ಉತ್ತರ ಕನ್ನಡದ 'ಕೆನರಾ ಅರಣ್ಯ ವೃತ್ತ'ದಲ್ಲಿ 2017–18ನೇ ಸಾಲಿನಲ್ಲಿ ಅತೀ ಕಡಿಮೆ ಬೆಂಕಿ ಪ್ರಕರಣಗಳು ಯಲ್ಲಾಪುರದಲ್ಲಿ ದಾಖಲಾಗಿದ್ದವು. ಅದಕ್ಕೆ ಕಾರಣ ಇಲಾಖೆ ತೆಗೆದುಕೊಂಡ ಜಾಗೃತಿ ಕ್ರಮಗಳು. ಸಿಬ್ಬಂದಿಯು ಖುದ್ದಾಗಿ 1600ಕ್ಕೂ ಹೆಚ್ಚು ಮನೆಗಳಿಗೆ ತೆರಳಿ ಜಾಗೃತಿ ಮೂಡಿಸುವ ಕ್ಯಾಲೆಂಡರ್‌ಗಳನ್ನು ವಿತರಿಸಿತ್ತು. ಕಾಡಂಚಿನ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹಸಿರುಪಡೆ ರಚಿಸಿದ್ದರಿಂದ ಇವು ಕಾಡಿನ ಕಾವಲು ಕಾಯುವ, ಬೆಂಕಿ ಕಾಣಿಸಿಕೊಂಡ ತಕ್ಷಣ ಕ್ರಮ ತೆಗೆದುಕೊಳ್ಳುವ ಕೆಲಸಗಳನ್ನು ನಿರ್ವಹಿಸಿದವು. ಗ್ರಾಮ ಅರಣ್ಯ ಸಮಿತಿ ಮತ್ತು ಪಂಚಾಯಿತಿ ಸಿಬ್ಬಂದಿ ಸೇರಿ ಜಾಥಾ, ಬೀದಿ ನಾಟಕಗಳನ್ನು ನಡೆಸಿ, ಬೆಂಕಿಯು ಕಾಡನ್ನು ಸೋಕದಂತೆ ಎಚ್ಚರಿಕೆ ವಹಿಸುವ ಕುರಿತು ತಿಳಿಹೇಳಿದರು. ಈ ಎಲ್ಲ ಕ್ರಮಗಳ ಫಲಕವಾಗಿ ಆ ವರ್ಷ ಶೇ. 1ಕ್ಕಿಂತಲೂ ಕಡಿಮೆ ಪ್ರಕರಣಗಳು ವರದಿಯಾಗಿವೆ.

ಅತ್ತ ಸಾಗಿ ನೋಡಿದಾಗ, ಅದು ಮನುಷ್ಯರೇ ಹಚ್ಚಿದ ಬೆಂಕಿ ಎಂಬುದಕ್ಕೆ ನಿದರ್ಶನಗಳು ಅಲ್ಲಿದ್ದವು. ಸೊಪ್ಪುಸದೆಗಳನ್ನು ಕಡಿಯುತ್ತ ದಾರಿ ಮಾಡಿಕೊಂಡು ಬೆಟ್ಟದ ಮಧ್ಯಕ್ಕೆ ಕಿಡಿಗೇಡಿಗಳು ತೆರಳಿದ ಕುರುಹುಗಳಿದ್ದವು. ಬೆಂಕಿಯ ಮೂಲ ಏನೇ ಇರಲಿ, ಸದ್ಯಕ್ಕೆ ಅದನ್ನು ನಂದಿಸುವುದಷ್ಟೇ ಸಿಬ್ಬಂದಿಯ ಕಾಯಕವಲ್ಲವೇ. ಬೆಂಕಿ ನಂದಿಸುವ ಕೆಲಸ ಮತ್ತೆ ಶುರುವಾಯಿತು.

ಒಂದೊಂದು ಕಡೆ ಬೆಂಕಿ ಸೃಷ್ಟಿಯಾಗುತ್ತಿದ್ದರೆ ಅದರ ಹಿಂದೆ ಒಂದೊಂದು ರೀತಿಯ ಕಾರಣಗಳಿದ್ದವು. ಧರ್ಮಸ್ಥಳದ ಬಳಿ 33/11 ಕೆವಿ ಸ್ಟೇಷನ್‌ನಿಂದ ಶಿಶಿಲ ಫೀಡರ್, ನಿಡ್ಲೆ ಫೀಡರ್, ಪಟ್ರಮೆ ಫೀಡರ್‌ಗೆ ಎಚ್‌ಟಿ (ಹೈ ಟೆನ್ಶನ್) ಲೈನ್‌ಗಳು ಕಾಡಿನ ನಡುವೆ ಹಾದು ಹೋಗುತ್ತವೆ. ಪ್ರತೀ ಬೇಸಿಗೆ ಆರಂಭಕ್ಕೆ ಮುನ್ನ ಈ ಎಚ್‌ಟಿ ಲೈನ್‌ಗಳ ಇಕ್ಕೆಲಗಳಲ್ಲಿ ಬೆಳೆದ ಟೊಂಗೆಗಳನ್ನು ಕತ್ತರಿಸಬೇಕು. ಆ ಟೊಂಗೆಗಳು ವಿದ್ಯುತ್ ವೈರುಗಳನ್ನು ಸ್ಪರ್ಶಿಸದಂತೆ ಜತನ ಮಾಡಿಕೊಳ್ಳಬೇಕು. ಬಹುಶಃ ಬಿಸಿಗಾಳಿಗೆ ಟೊಂಗೆಗಳು ಸುಲಭವಾಗಿ ಈ ಎಚ್‌ಟಿ ಲೈನ್‌ಗಳ ಮೇಲೆ ಬಿದ್ದಿರಬೇಕೆನಿಸುತ್ತದೆ. ಎಲ್ಲವನ್ನೂ ಕಬಳಿಸುವುದಕ್ಕೆ ಬೆಂಕಿಯ ಜ್ವಾಲೆಗಳಿಗೆ ಪಿಳ್ಳೆ ನೆಪ ಮಾತ್ರ ಸಾಕಲ್ಲವೇ. ಕಾಳಿ ಹುಲಿರಕ್ಷಿತಾರಣ್ಯದ ಕುಳಗಿಯಲ್ಲಿಯೂ ಹೈಟೆನ್ಶನ್ ಲೈನ್ ಹಾದು ಹೋಗಿರುವ ಕಡೆಯಲ್ಲಿಯೇ ಬೆಂಕಿಯು ಹುಟ್ಟಿಕೊಂಡಿತ್ತು. ವಿಶಾಲವಾದ ಶ್ರೀಮಂತ ಸಸ್ಯಸಂಪತ್ತು ಬೂದಿಯಾಗಿಬಿಟ್ಟಿತು.

## ಜೀವಜಂತುವಿಗೆ ತೊಂದರೆ

ಶಿಬಾಜೆಯಲ್ಲಿ ಬೆಂಕಿ ನಂದಿಸುವ ಕಾಯಕದಲ್ಲಿಯೇ ಮುಳುಗಿದ್ದವರಿಗೆ ಇದ್ದಕ್ಕಿದ್ದಂತೆಯೇ ಪಕ್ಕದ ಹೊಸ್ತೋಟ ಬೆಟ್ಟದೊಳಗಿಂದ ಆನೆಗಳ ಆರ್ತನಾದ ಕೇಳಲಾರಂಭಿಸಿತು. ಕುತೂಹಲದಿಂದ ಅತ್ತ ಹೋಗಿ ಗಮನಿಸಿದಾಗ, ಬೆಂಕಿಯ ಅಬ್ಬರ, ಬಿಸಿಗಾಳಿಯ ದೆಸೆಯಿಂದ ಮರಿಯಾನೆಯೊಂದಿಗಿದ್ದ ತಾಯಿ ಆನೆಯು ಬೆಚ್ಚಿಬಿದ್ದಿತ್ತು. ಅದರ ಅಳಲು ಯಾರದ್ದಾದರೂ ಮನಸ್ಸು ಕಲಕುವಂತಿತ್ತು.

ಕಾಡೆಂದರೆ ಹಸುರು ಮರಗಳಷ್ಟೇ ಅಲ್ಲವಲ್ಲ. ಲಕ್ಷೋಪಲಕ್ಷ ಜೀವಿಗಳಿಗೆ ಅದು ಅಮ್ಮನ ಮಡಿಲು. ಅಲ್ಲಿ ಏಕಕೋಶ ಜೀವಿಗೂ ತಾವಿದೆ. ಕೀಟ, ಹುಳು ಹುಪ್ಪಟೆಗಳಿಗೂ ಜಾಗವಿದೆ. ನರಿ, ಜಿಂಕೆ, ಕಡವೆ, ಕೋಳಿ, ಕೋಣ ಎತ್ತುಗಳಿಗೂ ಬದುಕಿದೆ. ಬೃಹದಾಕಾರದ ಆನೆಗಳಿಗೂ ಅಲ್ಲಿ ಮನೆಯಿದೆ. ಬೆಂಕಿಯ ಜ್ವಾಲೆ ಮಾತ್ರ ಏಕರೂಪವಾಗಿ ಎಲ್ಲ ಜೀವಿಗಳನ್ನೂ ಆಪೋಷಣ ತೆಗೆದುಕೊಳ್ಳುತ್ತ ಸಾಗುತ್ತದೆ. ಯಾರ ನೋವನ್ನು ಆಲಿಸುವುದಕ್ಕೆ ಯಾರಿಗೆ ಪುರುಸೊತ್ತಿದೆ? ಇಂತಹ ಭೀಕರ ಬೆಂಕಿಯನ್ನು ಮನುಷ್ಯನೇ ಸೃಷ್ಟಿಸುತ್ತಾನೆಂದರೆ ಅವನ ಅಂತರಂಗದೊಳಗೆ ಅಡಗಿರುವ ಕ್ರೌರ್ಯ ಎಷ್ಟು ಭಯಂಕರವಾಗಿರಬಹುದು?

ಪಶ್ಚಿಮ ಘಟ್ಟದಲ್ಲಿ ಆನೆಗಳು ಪೂರಾ